ಬರುತ್ತದೆ ಎನ್ನುವಂಥದ್ದನ್ನು ಹೇಳಿದ್ದೇನೆ. ಹಾಗೆಯೇ ಎಲ್ಲಿ 33 ಕೆ.ವಿ. ಸುಡುತ್ತೇ ಅಲ್ಲಿ up-gradation ಮಾಡುವಂಥದ್ದು ಮತ್ತು ಎಲ್ಲಿ 66 ಕೆ.ವಿ. ಸುಡುತ್ತೆ ಅದನ್ನು up-gradation ಮಾಡುವಂತಹ ದೃಷ್ಟಿಯಿಂದ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಈಶ್ವರ ಭೀಮಣ್ಣ ಖಂಡ್ರೆಯವರು.

ಟ್ರಾನ್ಸ್‌ಫಾರ್ಮರ್‌ಗಳ ಬದಲಾವಣೆ

114 (1122) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳಿವೆ; ಇವುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪದೇ ಪದೇ ಹಾಳಾಗುತ್ತಿರುವ ಸಂಖ್ಯೆ ಎಷ್ಟು;

ಆ) ಹಾಳಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಎಷ್ಟು ಸಮಯ ಬೇಕಾಗುತ್ತದೆ ಹಾಗೂ ಅಳವಡಿಕೆಗೆ ಇರುವ ನಿಯಮಗಳ ವಿವರ ನೀಡುವುದು;

ಇ) ಹಾಳಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಜಿಲ್ಲೆಯಲ್ಲಿ ಸುಮಾರು 2–3 ತಿಂಗಳು ಸಮಯ ತೆಗೆದುಕೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲು ಸರಕಾರ ಏನು ಕ್ರಮ ತೆಗೆದುಕೊಂಡಿದೆ?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಹಾಲಿ ಇರುವ ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ಒಟ್ಟು ಸಂಖ್ಯೆ 7,490. ಇವುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ವಿಫಲ ಗೊಂಡಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ 1,941. ಈ ಪೈಕಿ, ಖಾತರಿ ಅವಧಿಯಲ್ಲಿ ವಿಫಲಗೊಂಡಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ 657.

ಆ) ಸಾಮಾನ್ಯವಾಗಿ, ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್ ಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿರುವಂತೆ ನಗರ/ಪಟ್ಟಣ ಪ್ರದೇಶಗಳಲ್ಲಿ 24 ಘಂಟೆಗಳೊಳಗೆ ಹಾಗೂ ಗ್ರಾಮಾಂತರ

ಪ್ರದೇಶಗಳಲ್ಲಿ 72 ಘಂಟೆಗಳೊಳಗೆ ಬದಲಾಯಿಸಲಾಗುತ್ತಿದೆ. ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಾಗ ಸ್ಥಳ ಪರಿಶೀಲಿಸಿ ಪೂರ್ಣ ಮಾಹಿತಿಗಳೊಂದಿಗೆ ಒಂದು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತದೆ. ಈ ಅಂದಾಜು ಪಟ್ಟಿಗೆ ಮಂಜೂರಾತಿ ದೊರೆತ ನಂತರ ಉಗ್ರಾಣದಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಪಡೆದು ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗುತ್ತದೆ.

ಇ) ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸುವಲ್ಲಿ 2–3 ತಿಂಗಳ ಸಮಯ ತೆಗೆದುಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿರುವುದಿಲ್ಲ. ಆದರೆ, ಕೆಲವೊಮ್ಮೆ ವಿದ್ಯುತ್ ಸರಬರಾಜು ಕಂಪನಿಗಳ ಉಗ್ರಾಣಗಳಲ್ಲಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ದಾಸ್ತಾನು ಕಡಿಮೆ ಇರುವ ಸಂದರ್ಭಗಳಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಯಿಸುವಲ್ಲಿ ಸ್ವಲ್ಪ ವಿಳಂಬವಾಗುವ ಸಂಭವ ಇರುತ್ತದೆ.

ಈ) ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯಿಂದ ಆಗುವ ಸಮಸ್ಯೆಗಳನ್ನು ನಿವಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಅಕ್ರಮ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸಲು ಸೂಚಿಸ ಲಾಗಿದೆ. ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲ ಗೊಂಡಾಗ ತಕ್ಷಣವೆ ಸ್ಥಳ ಪರಿಶೀಲಿಸಿ ಆದಷಟು ಶೀಘ್ರಗತಿ ಯಲ್ಲಿ ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ. 25 ಕೆ.ವಿ. ಟ್ರಾನ್ಸ್‌ಫಾರ್ಮರನ್ನು ಹಾಕಲು ಯೋಚಿಸಲಾಗಿದೆ.
2. ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಖರೀದಿ ಹಾಗೂ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಶೀಘ್ರಗತಿಯಲ್ಲಿ ದುರಸ್ತಿ ಗೊಳಿಸುವ ಮೂಲಕ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಲಭ್ಯತೆಯನ್ನು ಹೆಚ್ಚಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ (2011–12) ಅಕ್ಟೋಬರ್–2011ರವರೆಗೆ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ಒಟ್ಟು 1,231 ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿ ಮಾಡಿರುತ್ತದೆ. ವಿಫಲಗೊಳಿಸಲು ಪ್ರಸ್ತುತ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಒಟ್ಟು 14

ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ (2011–12) ಅಕ್ಟೋಬರ್–2011 ರವರೆಗೆ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳಿಂದ ಒಟ್ಟು 1,567 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾಗಿರುತ್ತದೆ.

3. ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೇಲೆ ಆಗುವ ಓವರ್ ಲೋಡ್ ಸಮಸ್ಯೆಯಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗುವ ಸಂಭವ ಹೆಚ್ಚಿಗೆ ಇರುವುದರಿಂದ, ಈ ಓವರ್ ಲೋಡ್ ಸಮಸ್ಯೆಯನ್ನು ನಿವಾರಿಸಲು ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುತ್ತಿದೆ.
4. ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ "ನಿರಂತರಜ್ಯೋತಿ" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಘುತ್ತಿದ್ದು, ಈ ಯೋಜನೆಯಡಿ ಕೃಷಿ ಮತ್ತು ಕೃಷಿಯೇತರ ಸ್ಥಾವರಗಳಿಗೆ ಪ್ರತ್ಯೇಕ ಫೀಡರ್‌ಗಳನ್ನು ಹಾಗೂ ಹೆಚ್ಚುವರಿ ಬಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಹಾಳಿ ಇರುವ ಫೀಡರ್‌ಗಳಲ್ಲಿನ ವಿದ್ಯುತ್ ಹೊರೆಯು ಕಡಿಮೆಗೊಳ್ಳುತ್ತದೆ. ಇದರಿಂದ, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯು ಕಡಿಮೆಯಾಗುತ್ತದೆ.
5. ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಗುಣಮಟ್ಟವನ್ನು ಖಾತರಿಪಡಿಸಲು ಮೇಲ್ವಿಚಾರಣೆ ನಡೆಸಲಾಗುತ್ತಿದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಏನು ಉತ್ತರ ಕೊಟ್ಟಿದ್ದಾರೆ ಅದರಲ್ಲಿ 7,490 ಟ್ರಾನ್ಸ್‌ಫಾರ್ಮರ್‌ಗಳಿದೆ. ಒಂದು ವರ್ಷದಲ್ಲಿ ಸುಮಾರು 1,941 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿವೆ. ಮತ್ತೆ ಖಾತರಿ ಅವಧಿಯಲ್ಲಿ ಸುಮಾರು 657 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿದೆ. ಉತ್ತರದಲ್ಲಿ ನಗರ ಪ್ರದೇಶದಲ್ಲಿ 24 ಗಂಟೆ ಒಳಗೆ, ಗ್ರಾಮೀಣ ಪ್ರದೇಶದಲ್ಲಿ ಮೂರು ದಿವಸಗಳ ಒಳಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾವಣೆ ಮಾಡುತ್ತೇವೆಂದು

ಕೊಡಲಾಗಿದೆ. ನಮ್ಮ ಗಡಿ ಭಾಗದಲ್ಲಿ ಸುಮಾರು 25 ಹಳ್ಳಿಗಳು ಮಹಾರಾಷ್ಟ್ರಕ್ಕೆ ಹೊಂದಿಕೊಂಡಿದೆ. ಅಲ್ಲಿ ಎರಡೆರಡು ತಿಂಗಳು, ಮೂರ್ನೂರು ತಿಂಗಳುಗಳವರೆಗೆ ಸುಟ್ಟಂತಹ ಟ್ರಾನ್ಸ್‌ಫಾರ್ಮರ್‌ಗಳು ಬದಲಾವಣೆಯಾಗುತ್ತಿಲ್ಲ. ಖಾತರಿ ಇದ್ದಂತಹ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿರುವುದಕ್ಕೆ ಏನು ಕ್ರಮ ವಹಿಸುತ್ತಿದ್ದಾರೆ? ಮತ್ತೆ ಕನಿಷ್ಠ ಮೂರು ದಿವಸಗಳ ಒಳಗಾಗಿ ಇಲ್ಲದಿದ್ದರೂ ಏಳು ದಿವಸಗಳ ಒಳಗಾಗಿಯಾದರೂ transformer ಬದಲಾವಣೆ ಮಾಡಬೇಕು. ಏಕೆಂದರೆ ಉಗ್ರಾಣದಿಂದ ನಾವು ಟ್ರಾನ್ಸ್‌ಫಾರ್ಮರ್‌ಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈ ಉತ್ತರ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಅಲ್ಲಿ ಉಗ್ರಾಣವೇ ಇಲ್ಲ. ಯಾವ ಟ್ರಾನ್ಸ್‌ಫಾರ್ಮರ್‌ಗಳು ಸುಡುತ್ತದೆ ಅದನ್ನೇ ಪುನಃ ರಿಪೇರಿ ಮಾಡುತ್ತಾರೆ ಮತ್ತೆ ಹಾಕುತ್ತಾರೆ. ಅದರಲ್ಲಿ ಹೆಚ್ಚುವರಿಯಾಗಿ ಲೋಡ್ ಇದೆ ಎಂದು ಹೇಳಿದರು ಅರ್ಧಕ್ಕಿಂತ ಹೆಚ್ಚಿಗೆ ಟ್ರಾನ್ಸ್‌ಫಾರ್ಮರ್‌ಗಳು ಸುಡುವುದು 40 ವರ್ಷಗಳ ಕೆಳಗಡೆ ಕಂಡಕ್ಟರ್ ಹಾಕಿದ್ದಾರೆ. ಎಲ್ಲಿ pole to pole distance 50 ಫೀಟ್ ಇರುವುದು ನಮ್ಮ ಭಾಗದಲ್ಲಿ 300 ಫೀಟ್ ಇದೆ. ಅದು ಬದಲಾವಣೆ ಮಾಡಬೇಕಾಗುತ್ತದೆ. 2002–03, 2006–07ನೇ ಇಸವಿಯಲ್ಲಿ ಅಕ್ರಮ ಸಕ್ರಮ ಮಾಡಿರುವಂತದ್ದಕ್ಕೆ ಇಲ್ಲಿಯವರೆಗೆ ಯಾವುದೇ ಮೂಲಭೂತ ಸೌಕರ್ಯ ಕೊಟ್ಟಿಲ್ಲ. Pole ಕೊಟ್ಟಿಲ್ಲ. ಕಂಡಕ್ಟರ್ ಕೊಟ್ಟಿಲ್ಲ, ಏನೂ ಕೊಟಿಲ್ಲ ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೋರುತ್ತಿದ್ದೇನೆ.

ಕುಮಾರಿ ಶೋಭಾ ಕರಂದ್ಲಾಜೆ : ಭಾಲ್ಕಿ ತಾಲ್ಲೂಕು 2012ರ ಮಾರ್ಚ್ ಒಳಗೆ ನಿರಂತರ ಜ್ಯೋತಿಗೆ ಒಳಪಡುತ್ತದೆ. 2012ರ ಮಾರ್ಚ್ ಒಳಗೆ ಅಲ್ಲಿ ನಿರಂತರ ಜ್ಯೋತಿಯ ಕಾರ್ಯಕ್ರಮ ಪೂರ್ಣವಾಗುತ್ತದೆ. First phase ದು ಮಾರ್ಚ್ 2012ಕ್ಕೆ ಮತ್ತು Second phase ಗೆ ಬರುವಂಥ ಎಲ್ಲಾ ತಾಲ್ಲೂಕುಗಳಲ್ಲಿ ಕೂಡ ಡಿಸೆಂಬರ್ 2012ರ ಒಳಗೆ ನಿರಂತರ ಜ್ಯೋತಿ ಪೂರ್ಣವಾಗುತ್ತದೆ. ಆಗ ಇಷ್ಟೂ ಜನ ಇವತ್ತು ಟ್ರಾನ್ಸ್‌ಫಾರ್ಮರ್‌ಗಳ failure ಬಗ್ಗೆ ಸುಟ್ಟುಹೋಗಿರುವ ಬಗ್ಗೆ ಏನು ಪ್ರಶ್ನೆ ಕೇಳಿದ್ದಾರೆ, ಈ ರೀತಿಯ ಬಹಳಷ್ಟು ಸಮಸ್ಯೆಗಳು ಬಗೆಹರಿಯುತ್ತವೆ. ಏಕೆಂದರೆ ರೈತರಿಗೆ ಮತ್ತು ಗ್ರಾಹಕರಿಗೆ ಬೇರೆ ಬೇರೆ ಲೈನ್‌ಗಳು ಇರುತ್ತವೆ ಆಗ ಸಿಂಗಲ್ ಲೈನ್ ಕೊಟ್ಟಾಗ ಟ್ಯಾಪ್ ಮಾಡುವುದಕ್ಕೆ ಬರುವುದಿಲ್ಲ. ಆ ಕಾರಣಕ್ಕಾಗಿ ಈ ಒಂದು ಸಮಸ್ಯೆ

ಬಗೆಹರಿಯುತ್ತದೆ. ಹಾಗೇನೆ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ ಏನು ಕೇಳಿದ್ದಾರೆ. ಅದನ್ನು ಆದಷ್ಟು ಬೇಗ ಪರಿಹಾರ ಮಾಡುವ ದೃಷ್ಟಿಯಿಂದ ಪ್ರಯತ್ನವನ್ನು ಮಾಡುತ್ತೇವೆ. ಈಗಾಗಲೇ ನಾವು ಗುಲ್ಬರ್ಗಾ ಕಂಪನಿಗೆ ಸೂಚನೆಯನ್ನು ಕೊಟ್ಟು ತಕ್ಷಣ ಅಲ್ಲಿಗೆ ಸ್ಪಂದಿಸಬೇಕು ಎನ್ನುವಂಥದ್ದನ್ನು ಹೇಳಿದ್ದೇವೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಇನ್ನೊಂದು ಕೊನೆ ಪ್ರಶ್ನೆಯಿದೆ. ನಿರಂತರ ಜ್ಯೋತಿ ಹೋದ ವರ್ಷ ಆಗಬೇಕಾಗಿತ್ತು. ಈ ವರ್ಷ ಇನ್ನೂ ಪೂರ್ತಿಯಾಗುವಂತಹ ಲಕ್ಷಣಗಳು ಕಾಣುತ್ತಿಲ್ಲ.

ಅಧ್ಯಕ್ಷರು ಮಾರ್ಚ್ ಒಳಗೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಈಗ ಇರುವಂಥ ಟ್ರಾನ್ಸ್‌ಫಾರ್ಮರ್‌ಗಳು ಏನು ಸುಡುತ್ತಿದೆ, ಏನು ಒಂದು ಪದ್ಧತಿಯಿದೆ, ಅದರಲ್ಲಿ ರೈತರೇ ಸ್ವತಃ ಬಾಡಿಗೆ ವಾಹನ ಮಾಡಿಕೊಂಡು ಆ ಒಂದು ಕಛೇರಿಗೆ ತೆಗೆದುಕೊಂಡು ಹೋಗಬೇಕು.

ಅಧ್ಯಕ್ಷರು : ಪ್ರಶ್ನೆ ಕೇಳಿ. ನೀವು ಎಲ್ಲಾ explanation ಆದರೆ ಅವಕಾಶ ಕೊಡುವುದಿಲ್ಲ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಒಂದೇ ಒಂದು ಮಾನ್ಯ ಅಧ್ಯಕ್ಷರೆ, ಸಮಸ್ಯೆಗಳು ಬಹಳ ಇದೆ. ಬರುವುದು ಆರು ಗಂಟೆ ಆದರೆ ನಮಗೆ ನಾಲ್ಕು ಗಂಟೆಗಳು ಮಾತ್ರ ಸಿಗುತ್ತಿದೆ. ನಮ್ಮ ಜಿಲ್ಲೆಯಲ್ಲಿ 160 ಮೆಗಾವ್ಯಾಟ್‌ನಲ್ಲಿ 120 ಮೆಗಾವ್ಯಾಟ್‌ಗಳು ಮಾತ್ರ ಸಿಗುತ್ತಿದೆ. ನಾಲ್ಕು ಗಂಟೆನೂ ಗುಣಮಟ್ಟದ ವಿದ್ಯುತ್ ಸಿಗುತ್ತಿಲ್ಲ. ಅದಕ್ಕೆ ಕೊನೇ ಪ್ರಶ್ನೆ ಏನು ಎಂದು ಹೇಳಿದರೆ.

(ಗೊಂದಲ)

ಅಧ್ಯಕ್ಷರು : ಲಾಲಾಜಿ ಆರ್.ಮೆಂಡನ್‌ರವರು.

ಶ್ರೀ ಲಾಲಾಜಿ ಆರ್.ಮೆಂಡನ್ : ಮಾನ್ಯ ಅಧ್ಯಕ್ಷರೆ ಪ್ರಶ್ನೆ ಸಂಖ್ಯೆ 201 ಅನ್ನು ಸನ್ಮಾನ್ಯ ಸಮಾಜ ಕಲ್ಯಾಣ ಇಲಾಖೆರವರು.

ಶ್ರೀ ಅಧ್ಯಕ್ಷರು : ಲಾಲಾಜಿ ಆರ್.ಮೆಂಡನ್‌ರವರನ್ನು ಕರೆದಿದ್ದೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಒಂದೇ ಒಂದು ಉತ್ತರ ಕೊಡಲಿ. ಏಳು ದಿವಸಗಳ ಒಳಗಾದರೂ ಟ್ರಾನ್ಸ್‌ಫಾರ್ಮರ್ ಬದಲಾವಣೆ ಮಾಡುತ್ತೇವೆಂದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು : ಲಾಲಾಜಿ ಆರ್. ಮೆಂಡನ್‌ರವರೇ, ಮಾತನಾಡಿ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ನಮ್ಮ ಗಡಿ ಭಾಗದ ಪ್ರದೇಶ ಬೀದರ್ ಜಿಲ್ಲೆ 700 ಕಿ.ಮೀ. ಗೂ ದೂರವಿದೆ. ನೀವು ಇದಕ್ಕೂ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ ಯಾವಾಗ ಮಾತನಾಡಬೇಕು?

ಒಬ್ಬ ಮಾನ್ಯ ಸದಸ್ಯರು : ನಾವು ಗಡಿ ಭಾಗದಲ್ಲಿ ಇರತಕ್ಕಂತ ಜನ....

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ. ನಿವೇನು ಪ್ರಶ್ನೆ ಕೇಳಲಿಲ್ಲವಲ್ಲ. ನಿಮಗೆ ಸ್ಪಷ್ಟವಾಗಿ ಹೇಳಿದ್ದಾರೆ ತಾವು ಉತ್ತರ ಹೇಳಿ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ : ಇದಕ್ಕೆ ಉಗ್ರಾಣದಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಕೊಟ್ಟು ತಕ್ಷಣ ಬದಲಾವಣೆ ಮಾಡುವಂತಹದ್ದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ. ಅಷ್ಟೇ ಸಾಕು.

ಹೊಸ ವಿದ್ಯಾರ್ಥಿ ನಿಲಯ ಪ್ರಾರಂಭ ಮಾಡುವ ಬಗ್ಗೆ

201 ಶ್ರೀ ಲಾಲಾಜಿ.ಆರ್. ಮೆಂಡನ್ : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ನಿಲಯಗಳನ್ನು ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಕಾಪು ವಿಧಾನ ಸಭಾ ಕ್ಷೇತರದ ವ್ಯಾಪ್ತಿಯಲ್ಲಿ ಬರುವ 2010 ಮತ್ತು 2011ನೇ ಸಾಲಿನಲ್ಲಿ ಹೊಸದಾಗಿ ನಿರ್ಮಾಣ ಮಾಡಲಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ನಿಲಯಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆಯೇ;

ಇ) ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೂಮಿ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಈ) ಕಾಪು ವಿಧಾನಸಭಾ ಕ್ಷೇತ್ರದ ಮಲ್ಲಾರು ಗ್ರಾಮದಲ್ಲಿರುವ ಮೊರಾರ್ಜಿ ವಸತಿ ಶಾಲೆಗೆ ಶಾಶ್ವತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?